# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ಚಿಕ್ಕಬಳ್ಳಾಪುರ ವಿಭಾಗ :: ಚಿಕ್ಕಬಳ್ಳಾಪುರ

ಸಂ/ಕರಾಸಾ/ಚಿಬವಿ/ಸಂ/ವಾ/343 /2023-24 ದಿನಾಂಕ: 09.06.2023

## ಇ-ಟೆಂಡರ್ ಪ್ರಕಟಣೆ ಸಂಖ್ಯೆ : 01/2023-24

(ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

*******

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಚಿಕ್ಕಬಳ್ಳಾಪುರ ವಿಭಾಗಕ್ಕೆ ಸೇರಿದ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮಿನಿ & ಮುಖ್ಯ ಮತ್ತು ಗೌರಿಬಿದನೂರು ಬಸ್ ನಿಲ್ದಾಣದಲ್ಲಿ ಖಾಲಿಯಿರುವ / ಖಾಲಿಯಾಗುವ ವಾಣಿಜ್ಯ ಸ್ಥಳಗಳಾದ ಶಾಶ್ವತ / ತೆರೆದ ಸ್ಥಳ ಮಳಿಗೆಗಳಲ್ಲಿ ವ್ಯಾಪಾರ ನಡೆಸಲು ಪರವಾನಗಿ ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ, **ದಿನಾಂಕ:12.06.2023** ರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಶಾಶ್ವತ ಮಳಿಗೆಗೆ ಐದು (05) ವರ್ಷಗಳ ಅವಧಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ" ಆಧಾರದ ಮೇಲೆ ಪರವಾನಗಿಯನ್ನು ಇ-ಟೆಂಡರ್ ಮುಖಾಂತರ ನೀಡಲಾಗುವುದು. ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರ್ಕಾರದ ಸ್ಟಾಂಪ್ ಕಾಯಿದೆ ಅನ್ವಯ ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು ಹಾಗೂ ಪರವಾನಗಿ ಶುಲ್ಕದ ಮೇಲೆ ಸರ್ಕಾರ ನಿಗಧಿಪಡಿಸಿರುವ ಜಿ.ಎಸ್.ಟಿ. ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಮಾಸಿಕ ಪರವಾನಗಿ ಶುಲ್ಕದ ಮೇಲೆ ವಾರ್ಷಿಕ ಶೇಕಡಾ.10 ರಷ್ಟು ಹೆಚ್ಚುವರಿ ಶುಲ್ಕ ಪಾವತಿಸತಕ್ಕದ್ದು.

### ಇ-ಟೆಂಡರ್‌ಗೆ ಒಳಪಡುವ ವಾಣಿಜ್ಯ ಮಳಿಗೆಗಳ ವಿವರ

| ಕ್ರ. ಸಂ | ಬಸ್ ನಿಲ್ದಾಣ | ನಿಗಧಿಪಡಿಸಿದ ವ್ಯವಹಾರ | ವಿಸ್ತೀರ್ಣ (ಅಂದಾಜು ಚ.ಅಡಿ) | ಮಾದರಿ & ಅವಧಿ | ಮಾಸಿಕ ಲೈಸೆನ್ಸ್ ಶುಲ್ಕ(ರೂ) | ಇ.ಎಂ.ಡಿ. ಮೊತ್ತ.ರೂ. | ಮೀಸಲಾತಿ | ಅರ್ಜಿ ಶುಲ್ಕ + ಜಿ.ಎಸ್.ಟಿ | ಖಾಲಿಯಾಗುವ ದಿನಾಂಕ |
|---|---|---|---|---|---|---|---|---|---|
| 1 | ಶಿಡ್ಲಘಟ್ಟ ಮಿನಿ | ಜನರಲ್ ಸ್ಟಾಲ್-05 | 107.00 | ಶಾಶ್ವತ & 5ವರ್ಷ | 908/- | 2724/- | ಸಾಮಾನ್ಯ | 118/- | ಖಾಲಿ |
| 2 | ಶಿಡ್ಲಘಟ್ಟ ಮಿನಿ | ಜನರಲ್ ಸ್ಟಾಲ್-06 | 107.00 | ಶಾಶ್ವತ & 5ವರ್ಷ | 1610/- | 4830/- | ಸಾಮಾನ್ಯ | 118/- | 19.11.2023 |
| 3 | ಶಿಡ್ಲಘಟ್ಟ ಮುಖ್ಯ | ಜನರಲ್ ಸ್ಟಾಲ್-09 | 85.68 | ಶಾಶ್ವತ & 5ವರ್ಷ | 19250/- | 57750/- | ಸಾಮಾನ್ಯ | 227/- | ಖಾಲಿ |
| 4 | ಗೌರಿಬಿದನೂರು | ಜನರಲ್ ಸ್ಟಾಲ್-02 | 130.00 | ಶಾಶ್ವತ & 5ವರ್ಷ | 8611/- | 25833/- | ಸಾಮಾನ್ಯ | 118/- | 28.08.2023 |

ಇ-ಟೆಂಡರ್/ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಷರತ್ತುಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ. ಅಲ್ಲದೆ 'ಅರ್ಜಿದಾರರು ಸಂಬಂಧಿಸಿದ ಮಳಿಗೆಗಳ ಅರ್ಜಿ ಶುಲ್ಕ/ಇ.ಎಂ.ಡಿ ಮೊತ್ತವನ್ನು Divisional Controller, KSRTC, Chikkaballapur ರವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಮೂಲಕ ಪಡೆದು, **ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟಿನಲ್ಲಿ ಅರ್ಜಿ ಸಲ್ಲಿಸಿದ ನಂತರ ಹಾಗೂ ನಿಗಧಿತ ದಿನಾಂಕದೊಳಗೆ ಮುಚ್ಚಿದ ಲಕೋಟೆಯಲ್ಲಿ ಎಲ್ಲಾ ದಾಖಲಾತಿಗಳೊಂದಿಗೆ ಚಿಕ್ಕಬಳ್ಳಾಪುರ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ತಮ್ಮ ಆನ್‌ಲೈನ್ ಅರ್ಜಿಯನ್ನು ತಿರಸ್ಕರಿಸಲಾಗುವುದು.**

**"ಬಿಡ್ಡುದಾರರು ನಿಗದಿತ ಇ.ಎಂ.ಡಿ ಮೊತ್ತದಲ್ಲಿ ರೂ.500/- ನ್ನು ಇ-ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ ಮೊತ್ತವನ್ನು ಡಿ.ಡಿ.ರೂಪದಲ್ಲಿ ಪಡೆದು ನಿಗಧಿತ ದಿನಾಂಕದೊಳಗೆ ಮುಚ್ಚಿದ ಲಕೋಟೆಯಲ್ಲಿ ಖುದ್ದಾಗಿ ಈ ಕಛೇರಿಯಲ್ಲಿ ಸಲ್ಲಿಸುವುದು. ಸದರಿ ಡಿ.ಡಿ.ಯ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್ ಲೋಡ್ ಮಾಡುವುದು."**

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ ಕ.ರಾ.ರ.ಸಾ.ನಿಗಮ ಚಿಕ್ಕಬಳ್ಳಾಪುರ ವಿಭಾಗ ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂ. 7760990352

| | | |
|---|---|---|
| 1 | ಇ-ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 05.07.2023 ಸಮಯ: 17.00 |
| 2 | ಇ-ಟೆಂಡರ್ ಅರ್ಜಿಶುಲ್ಕ, ಇ.ಎಂ.ಡಿ ಮೂಲ ಡಿಡಿ/ ಇತರೆ ದಾಖಲಾತಿಗಳನ್ನು ಚಿಕ್ಕಬಳ್ಳಾಪುರ ವಿಭಾಗೀಯ ಕಛೇರಿಯಲ್ಲಿ ಸ್ವೀಕರಿಸುವ ದಿನಾಂಕ ಮತ್ತು ಸಮಯ | 06.07.2023 & 07.07.2023 (ಸಮಯ: 10.00 ರಿಂದ 15.00) |
| 3 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | 11.07.2023 ಸಮಯ: 10.00 |

-ಸಹಿ-

ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಚಿಕ್ಕಬಳ್ಳಾಪುರ ವಿಭಾಗ.

ಪ್ರತಿಯನ್ನು ಗೌರವಪೂರ್ವಕವಾಗಿ:

1. ಆಪ್ತ ಸಹಾಯಕರು, ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), ಕ.ರಾ.ರ.ಸಾ.ನಿಗಮ, ಬೆಂ.ಮ.ನ.ಸಾ.ನಿಗಮ, ವಾಕರಸಾಸಂಸ್ಥೆ, ಕಕರಸಾಸಂಸ್ಥೆ ರವರ ಮಾಹಿತಿಗಾಗಿ.
2. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ಬೆಂಮನಸಾನಿಗಮ, ವಾಕರಸಾಸಂಸ್ಥೆ, ಕಕರಸಾಸಂಸ್ಥೆ ರವರ ಮಾಹಿತಿಗಾಗಿ.
3. ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ಬೆಂ.ಮ.ನ.ಸಾ.ನಿಗಮ, ವಾಕರಸಾಸಂಸ್ಥೆ, ಕಕರಸಾಸಂಸ್ಥೆ ರವರ ಮಾಹಿತಿಗಾಗಿ.
4. ಘಟಕ ವ್ಯವಸ್ಥಾಪಕರು, ಚಿಕ್ಕಬಳ್ಳಾಪುರ/ಚಿಂತಾಮಣಿ/ಬಾಗೇಪಲ್ಲಿ/ಗೌರಿಬಿದನೂರು/ದೊಡ್ಡಬಳ್ಳಾಪುರ/ಶಿಡ್ಲಘಟ್ಟ ಘಟಕ ರವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ ಮತ್ತು ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ವಿಭಾಗೀಯ ಸಂಚಾಲನಾಧಿಕಾರಿ/ಭದ್ರತಾ ಮತ್ತು ಜಾಗೃತಾಧಿಕಾರಿ/ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರು/ ಸಹಾಯಕ ಲೆಕ್ಕಾಧಿಕಾರಿ/ ಸಹಾಯಕ ಕಾನೂನು ಅಧಿಕಾರಿ/ ವಿಭಾಗೀಯ ಭದ್ರತಾ ನಿರೀಕ್ಷಕರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಚಿಕ್ಕಬಳ್ಳಾಪುರ ವಿಭಾಗ